EGT-D-KND

ಕನ್ನಡ / KANNADA

ಪತ್ರಿಕೆ II / Paper II

(ಸಾಹಿತ್ಯ) / (LITERATURE)

ವೇಳೆ : **ಮೂರು** ಗಂಟೆ
*Time Allowed : **Three** Hours*

ಗರಿಷ್ಠ ಅಂಕಗಳು : **250**
*Maximum Marks : **250***

ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು** ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ **1** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ ***ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)*** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

Question Paper Specific Instructions

Please read each of the following instructions carefully before attempting questions :

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Question nos. **1** and **5** are compulsory and out of the remaining, any **THREE** are to be attempted choosing at least **ONE** question from each section.*

The number of marks carried by a question / part is indicated against it.

*Answers must be written in **KANNADA (Kannada script)**.*

Word limit in questions, wherever specified, should be adhered to.

Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.

Optional Province · optionalprovince.com

SECTION A

Q1. ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ ಅವುಗಳ ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ. (ಪ್ರತಿಯೊಂದೂ 150 ಪದಗಳ ಉತ್ತರ ಮಿತಿಯಲ್ಲಿ) *10×5=50*

(a) ನಿನ್ನನೆ ನೆಚ್ಚಿದಂ ಕುರು ಮಹೀಪತಿ ನಿನ್ನ ಶರಾವಳಿಗಳ್ಗಿಮು
ನ್ನನ್ನಡುಗುತ್ತುಮಿರ್ಪುದರಿ ಸಾಧನ ಸಂಪದಮಂತೆ ಶಸ್ತ್ರಸಂ
ಪನ್ನನೆ ಆಗಿ ಶಲ್ಯನನೆ ಸಾರಥಿಯಾಗಿರೆ ಮಾಡಿ ಕಾದು ನೀಂ
ನಿನ್ನಯ ಬಲ್ಲಮಾಟ್ಕೆಯೊಳಿದಂ ನುಡಿದೆಂ ನಿನಗಂಗವಲ್ಲಭಾ *10*

(b) ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ !
ನೀನೆನ್ನಂ ತೊಮ್ಮೆ ಒಡಲುಗೊಂಡು ನೋಡಾ ರಾಮನಾಥ ! *10*

(c) ಸವಿಯು ಸಕ್ಕರೆಯೊಳಗೋ ಸಕ್ಕರೆಯು ಸವಿಯೊಳಗೋ
ಸವಿಯು ಸಕ್ಕರೆಯೆರಡು ಜಿಹ್ವೆಯೊಳಗೋ
ಜಿಹ್ವೆ ಮನಸಿನ ಒಳಗೋ ಮನಸು ಜಿಹ್ವೆಯ ಒಳಗೋ
ಜಿಹ್ವೆ ಮನಸುಗಳೆರಡು ನಿನ್ನೊಳಗೋ ಅರಿಯೆ *10*

(d) ಕಾದಿ ಕೊಲುವೊಡೆ ಪಾಂಡುಸುತರು ಸ
ಹೋದರರು ಕೊಲಲಿಲ್ಲ ಕೊಲ್ಲದೆ
ಕಾದೆನಾದೊಡೆ ಕೌರವಂಗನಿಯಲಿ ಹೊಗಲಿಲ್ಲ
ಬೇಧದಲಿ ಹೊಕ್ಕಿರಿದನೋ ಮಧು
ಸೂದನನು ತಾನಕಟೆನುತ ಘನ ಚಿಂ
ತೋದಧಿಯಲದ್ದವೊಲು ಮೌನದೊಳಿದ್ದನಾ ಕರ್ಣ *10*

(e) ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು
ರಯ್ಯ ಮಂಚಿದಿಯೆನೆ ತೆಲುಗಾ
ಅಯ್ಯ ಎಂಚ ಪೊರ್ಲಾಂಡೆಂದು ತುಳುವರು
ಮೆಯ್ಯುಬ್ಬಿ ಕೇಳಬೇಕಣ್ಣಾ *10*

Optional Province · optionalprovince.com

Q2. (a) ಪಂಪನ 'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿ ಕರ್ಣನ ಶೌರ್ಯ ಮತ್ತು ತ್ಯಾಗದ ಗುಣಗಳನ್ನು ಕುರಿತು ಚರ್ಚಿಸಿ. *20*

(b) 'ವಿದ್ಯುಚ್ಚೋರ ರಿಸಿಯ ಕಥೆ' ಯಲ್ಲಿ ನಿರೂಪಿತವಾಗಿರುವ ಜೈನಧರ್ಮದ ತತ್ವಗಳು ಮತ್ತು ಅವುಗಳ ಪರಿಣಾಮಗಳನ್ನು ಕುರಿತು ವಿಶ್ಲೇಷಿಸಿ. *20*

(c) ಅಕ್ಕಮಹಾದೇವಿ ಮತ್ತು ಚೆನ್ನಮಲ್ಲಿಕಾರ್ಜುನನ ಸಂಬಂಧದ ಸ್ವರೂಪವನ್ನು ವಿವರಿಸಿ. *10*

Q3. (a) 'ಕುಮಾರವ್ಯಾಸ ಭಾರತ'ದ ಕಾವ್ಯದಲ್ಲಿ ಕರ್ಣ ಮತ್ತು ಶಲ್ಯರ ನಡುವೆ ನಡೆಯುವ ವಾಗ್ವಾದಗಳನ್ನು ಕುರಿತು ಚರ್ಚಿಸಿ. *20*

(b) ಹರಿಹರನ 'ನಂಬಿಯಣ್ಣ ರಗಳೆ' ಯಲ್ಲಿ ಭಕ್ತಿ ಮತ್ತು ಶೃಂಗಾರ ರಸಗಳ ಔನ್ನತ್ಯವನ್ನು ಕುರಿತು ವಿಶ್ಲೇಷಿಸಿ. *20*

(c) ಕನಕದಾಸರ ಕೀರ್ತನೆಗಳಲ್ಲಿ ಅಭಿವ್ಯಕ್ತವಾಗಿರುವ ತಾತ್ತ್ವಿಕ ಚಿಂತನೆಗಳನ್ನು ವಿವರಿಸಿ. *10*

Q4. (a) 'ಭರತೇಶ ವೈಭವ' ಕಾವ್ಯದಲ್ಲಿ ಚಿತ್ರಿತವಾಗಿರುವ ಭರತೇಶ ಮತ್ತು ಕುಸುಮಾಂಜಲಿ ಅವರ ದಾಂಪತ್ಯವನ್ನು ಕುರಿತು ಚರ್ಚಿಸಿ. *20*

(b) 'ವಚನ ಕಮ್ಮಟ' ಕೃತಿಯ ಹಿನ್ನೆಲೆಯಲ್ಲಿ ವಚನಗಳ ಸಾಹಿತ್ಯಕ ಮತ್ತು ಸಾಮಾಜಿಕ ಸ್ವರೂಪಗಳನ್ನು ವಿಶದೀಕರಿಸಿ. *20*

(c) ಕನಕದಾಸರ ಕೀರ್ತನೆಗಳಲ್ಲಿ ವ್ಯಕ್ತವಾಗುವ ಸಾಮಾಜಿಕ ಸಮಾನತೆಯ ಪರಿಕಲ್ಪನೆಯನ್ನು ವಿವರಿಸಿ. *10*

Optional Province · optionalprovince.com

SECTION B

Q5. ಈ ಕೆಳಗಿನವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ.

(ಪ್ರತಿಯೊಂದೂ 150 ಪದಗಳ ಉತ್ತರ ಮಿತಿಯಲ್ಲಿ) ***10×5=50***

(a) 'ಶೂದ್ರತಪಸ್ವಿ' ನಾಟಕದಲ್ಲಿ ಸಾಮಾಜಿಕ ಪ್ರಜ್ಞೆ *10*

(b) 'ನಿವೃತ್ತರು' ಕಥೆಯ ಮುದುಕರ ನಿಜಸ್ವರೂಪ *10*

(c) 'ಜನಪದ ಗೀತಾಂಜಲಿ' ಕೃತಿಯ ಗೀತೆಗಳಲ್ಲಿ ಪ್ರಾದೇಶಿಕತೆ *10*

(d) ಆಧುನಿಕ ಕನ್ನಡ ಸಾಹಿತ್ಯದ ಮೊದಲ ಘಟ್ಟದ ಸಣ್ಣಕತೆಗಳು *10*

(e) ಒಗಟುಗಳಲ್ಲಿ ಕಂಡುಬರುವ ಸಾಮಾಜಿಕ ಜನಜೀವನ ಮತ್ತು ಜನಪದ ವಿವೇಕ *10*

Q6. (a) ನಿಮಗಿಟ್ಟಿರುವ ಪಠ್ಯದ ಹಿನ್ನೆಲೆಯಲ್ಲಿ ಕನ್ನಡ ಜಾನಪದ ಕಥೆಗಳ ವಸ್ತು ಮತ್ತು ರಚನಾಕ್ರಮವನ್ನು ವಿವರಿಸಿರಿ. *20*

(b) ನವ್ಯ ಕಥೆಗಳ ವಸ್ತು ಮತ್ತು ಭಾಷೆಯ ವಿಶಿಷ್ಟತೆಗಳನ್ನು ಕುರಿತು ವಿಶ್ಲೇಷಿಸಿ. *20*

(c) 'ಮಾಧವಿ' ಕಾದಂಬರಿಯಲ್ಲಿ ಸ್ತ್ರೀ ಸಂವೇದನೆಯ ಅನನ್ಯತೆಗಳನ್ನು ವಿವರಿಸಿ. *10*

Q7. (a) 'ಬೆಟ್ಟದ ಜೀವ' ಕಾದಂಬರಿಯ ಗೋಪಾಲಯ್ಯನ ಹೋರಾಟದ ಬದುಕನ್ನು ಕುರಿತು ಚರ್ಚಿಸಿ. *20*

(b) 'ಒಡಲಾಳ' ಕಾದಂಬರಿಯಲ್ಲಿನ ದಲಿತರ ಬದುಕಿನ ಚಹರೆಗಳನ್ನು ಕುರಿತು ವಿಶ್ಲೇಷಿಸಿ. *20*

(c) ತುಘಲಖ್‌ನ ಪಾತ್ರದ ಮಹತ್ವಾಕಾಂಕ್ಷೆಗಳನ್ನು ವಿವರಿಸಿ. *10*

Q8. (a) ದೇವರು ಮತ್ತು ನಂಬಿಕೆ ಇವುಗಳ ಸಂಬಂಧಗಳನ್ನು ಎ.ಎನ್. ಮೂರ್ತಿರಾಯರು ತಮ್ಮ 'ದೇವರು' ಕೃತಿಯಲ್ಲಿ ಹೇಗೆ ಪರಿಭಾವಿಸಿದ್ದಾರೆ – ಚರ್ಚಿಸಿ. *20*

(b) ಜನಪದ ಕಥೆಗಳನ್ನು ಜೀಶಂಪ ಅವರು ಹೇಗೆ ವರ್ಗೀಕರಿಸಿದ್ದಾರೆ – ವಿಶ್ಲೇಷಿಸಿ. *20*

(c) 'ಬೀದಿಮಕ್ಕಳು ಬೆಳೆದೋ' ಕೃತಿಯ ಹಿನ್ನೆಲೆಯಲ್ಲಿ ಗಾದೆಗಳ ಸಾಮಾಜಿಕ ಸ್ವರೂಪವನ್ನು ವಿವರಿಸಿ. *10*

Optional Province · optionalprovince.com